ಮನೆಗೆಲಸದವಳಂತೆ ಕಾಣುತ್ತಿರಲಿಲ್ಲ. ಈಕೆ ಹಣಕ್ಕಾಗಿ ಅವರ ಸಂಗ ಮಾಡಿದ್ದರೂ ಮಾಡಿರಬಹುದು ಎಂದು ಮತ್ತೊಂದು ಕ್ಷಣಕ್ಕೆ ಅನಿಸುತ್ತಿತ್ತು. ಹೀಗೆ ರಾಜೀವನ ಮನಸ್ಸು ಸರಸ್ವತಿಯ ಬಗ್ಗೆ ಒಂದು ನಿಲುವು ತೆಗೆದುಕೊಳ್ಳಲಾರದೆ ಆ ಕಡೆ ಈ ಕಡೆ ತೊಯ್ದಾಡತೊಡಗಿತು.

ಯೋಚಿಸುತ್ತಾ ಯೋಚಿಸುತ್ತಾ ರಾಜೀವ ಕೊನೆಗೂ ಹೆಂಡತಿ ಹೇಳಿದ್ದ ಮನೆಯ ವಿಳಾಸಕ್ಕೆ ಬಂದನು. ಅಲ್ಲಿ ಅವಳು ಹೇಳಿದ್ದ ಸರ್ಕಾರಿ ಶಾಲೆ, ನೀರಿನ ಟ್ಯಾಂಕ್ ಮತ್ತು ಅರಳಿಕಟ್ಟೆಯಿರುವ ಸ್ಥಳ ಸಿಕ್ಕಿತು. ಅಲ್ಲಲ್ಲಿ ಮನೆಗಳಿದ್ದವು. ಅವುಗಳಲ್ಲಿ ಪುಟ್ಟದಾದ ಶೀಟಿನ ಮನೆ, ಮನೆಯ ಮುಂದೆ ಹೂವಿನ ಗಿಡಗಳಿದ್ದವು. ಹೆಂಡತಿ ಹೇಳಿದ್ದ ಮನೆ ಇದೇ ಇರಬೇಕು ಎನಿಸಿತು. ಸರಸ್ವತಿಯು ಎಂದೋ ಹೇಳಿದ್ದ ಮನೆಯ ವಿಳಾಸವನ್ನು ಹೆಂಡತಿ ತಾನು ಕಣ್ಣಲ್ಲಿ ಕಂಡಂತೆ ವರ್ಣಿಸಿದ್ದಳು. ಅದಕ್ಕಾಗಿ ಹೆಮ್ಮೆಪಡುತ್ತಾ ರಾಜೀವನು ಯಾವುದಕ್ಕೂ ಇರಲಿ ಎಂದುಕೊಂಡು ಅಲ್ಲೇ ನೀರಿನ ಟ್ಯಾಂಕಿನ ಹತ್ತಿರ ನೀರು ಹಿಡಿಯುತ್ತಿದ್ದ ಹೆಂಗಸೊಬ್ಬರನ್ನು ಆ ಮನೆಯನ್ನು ತೋರಿಸುತ್ತಾ 'ಸರಸ್ವತಿಯವರ ಮನೆ ಇದೇನಾ?' ಎಂದು ಪ್ರಶ್ನಿಸಿದ.

'ಇಲ್ಲಿ ಯಾರೂ ಸರಸ್ವತಿ ಅನ್ನೋರು ಇಲ್ಲ. ಅದು ಹುಲಿಗೆಮ್ಮನ ಮನೆ. ಅವಳು ಯಾರದೋ ಮನೆಗೆಲಸ ಮಾಡೋಕೆ ಹೋಗ್ತಾಳೆ' ಎಂದಳು.

ಹೆಂಡತಿ ಹೇಳಿದ್ದ ವಿಳಾಸಕ್ಕೆ ಸರಿಯಾಗಿ ಬಂದಿದ್ದೇನೆ ಎಂದುಕೊಂಡಿದ್ದ ರಾಜೀವನಿಗೆ ಮತ್ತೆ ಅಡ್ರೆಸ್ ತಪ್ಪಿತೇ ಎಂಬ ಅನುಮಾನದಲ್ಲಿ ಆ ಮನೆಯ ಹತ್ತಿರ ಬಂದವನು, ಬಾಗಿಲು ತಟ್ಟಲೋ ಬೇಡವೋ ಎಂದು ಆಲೋಚಿಸುತ್ತಿರಬೇಕಾದರೆ, ಆ ಮನೆಯ ಬಾಗಿಲು ಥಟ್ಟನೆ ತೆರೆದುಕೊಂಡಿತು. ಒಳಗಿನಿಂದ ಬಾಗಿಲು ತೆರೆದುಕೊಂಡು ಹೊರಗೆ ಬಂದ ಸರಸ್ವತಿಯು, ತನ್ನ ಮನೆಯ ಬಾಗಿಲಿನ ಎದುರಿಗೆ ನಿಂತಿದ್ದ ರಾಜೀವನನ್ನು ನೋಡಿ, ಆಶ್ಚರ್ಯಚಕಿತಳಾಗಿ ನಿಂತಳು. ಒಂದು ಹಳೆಯ ನೈಟಿ ಹಾಕಿಕೊಂಡು, ಅಡ್ಡಾದಿಡ್ಡಿಯಾಗಿ ಹಾರುತ್ತಿದ್ದ ತಲೆಗೂದಲನ್ನು ಹಿಂದಕ್ಕೆ ಸರಿಸುತ್ತಾ, ಬಿಂದಿಗೆ ತೆಗೆದುಕೊಂಡು ಮನೆಯ ಎದುರಿಗಿದ್ದ ನೀರಿನ ಟ್ಯಾಂಕಿಗೆ ನೀರು ಹಿಡಿಯಲು ಹೊರಟವಳು, ರಾಜೀವನನ್ನು ನೋಡಿ ತಕ್ಷಣ, 'ಬನ್ನಿ ಸಾ, ಬನ್ನಿ ಸಾ' ಎಂದು ಗಡಿಬಿಡಿಯಿಂದ ರಾಜೀವನನ್ನು ಮನೆಯ ಒಳಗೆ ಸ್ವಾಗತಿಸಿ, ಪ್ಲಾಸ್ಟಿಕ್ ಕುರ್ಚಿಯನ್ನು ಹಾಕಿ, ಕುಳಿತುಕೊಳ್ಳಲು ಹೇಳಿದಳು.

ರಾಜೀವನಿಗೆ ಮನೆಯ ಒಳಗಿನ ಕತ್ತಲಿಗೆ ಕಣ್ಣು ಹೊಂದಿಸಿಕೊಳ್ಳಲು ಎರಡು ನಿಮಿಷ ಹಿಡಿಯಿತು. ಒಂದು ಪುಟ್ಟ ಹಾಲ್, ಅಡುಗೆ ಮನೆ, ಬಚ್ಚಲು ಮನೆಯಿದ್ದ ಪುಟ್ಟ ಮನೆ. ಗೋಡೆಗೆ ಬಿಳಿಯ ಸುಣ್ಣ ಬಳಿಯಲಾಗಿತ್ತು. ಅಲ್ಲೇ ಮಂಚದಲ್ಲಿ ಯಾರೋ ಮಲಗಿದಂತಿತ್ತು. 'ನನ್ನ ಗಂಡ ಸಾ' ಎಂದಳು. ಆ ಮಂಚದ ಮೇಲಿಂದ ಒಂದು ಕೃಶವಾಗಿದ್ದ ದೇಹದಿಂದ ಪಿಳಿಪಿಳಿ ಕಣ್ಣುಬಿಡುತ್ತಿದ್ದ ವ್ಯಕ್ತಿಯೊಬ್ಬನಿಗೆ ಸರಸ್ವತಿಯು 'ಇವರು ಗೊತ್ತಾಯ್ತಾ? ಇವರು ನಮ್ಮ ರಾಜೀವ್ ಸಾಹೇಬ್ರು' ಎನ್ನುತ್ತಾ ಪರಿಚಯಿಸಿದಳು. 'ನಮಸ್ತೆ ಸಾ' ಎನ್ನುತ್ತಾ ಮಲಗಿದ್ದಲ್ಲಿಂದಲೇ ಆತ ನಮಸ್ಕರಿಸಿದ. 'ಇವನು ನನ್ನ ಗಂಡ ಸಾ. ಅದು ಎಂಥದ್ದೋ ಟಿಬಿ ಕಾಯಿಲೆ ಬಂದು, ಹೀಗೆ ಹಾಸಿಗೆ ಹಿಡಿದು ಒಂದು ವರ್ಷದ ಮೇಲಾಯ್ತು, ಓಡಾಡಕ್ಕೆ ಆಗಲ್ಲ' ಎಂದಳು. ಅಲ್ಲೇ ನೆಲದಲ್ಲಿ ಪುಟ್ಟ ಬಾಲಕನೊಬ್ಬ ದೊಗಲೆ ಶರ್ಟ್ ಹಾಕಿಕೊಂಡು, ಆಟಿಕೆ ಕಾರ್ ಹಿಡಿದುಕೊಂಡು ಆಟವಾಡುತ್ತಿದ್ದ. ಆ ಬಾಲಕ ಹಾಕಿದ್ದ ಶರ್ಟ್ ಮತ್ತು ಕಾರ್ ತಮ್ಮ ಕಿರಿಯ ಮಗ ಬಳಸಿ ನಂತರ ತಾವೇ ಸರಸ್ವತಿಗೆ ಕೊಟ್ಟಿದ್ದು ಎಂದು ರಾಜೀವನಿಗೆ ಗೊತ್ತಾಯಿತು.

'ಒಂದೇ ಒಂದು ನಿಮಿಷ ಸಾ, ಹಾಲು ತರ್ತೇನೆ, ಚಹಾ ಇಡ್ತೇನೆ' ಎನ್ನುತ್ತಾ ರಾಜೀವ ಬೇಡವೆಂದರೂ ಕೇಳದೆ ಹಾಲು ತರಲು ಹೊರಗೆ ಹೋದಳು.

'ನಮ್ಮ ರಾಜೀವ್ ಸಾರು ದೇವರು', ಅಂತ ಯಾವಾಗಲೂ ನಿಮ್ಮ ಬಗ್ಗೆ ಹೇಳ್ತಾ ಇರ್ತಾಳೆ ಸಾ' ಎಂದ ಅವಳ ಗಂಡನ ಮಾತನ್ನು ಕೇಳಿ ರಾಜೀವ ಪೇಲವವಾಗಿ ನಕ್ಕ. 'ದುಡಿಯೋ ಟೈಮಲ್ಲಿ ನಂಗೆ ಕಾಯಿಲೆ ಬಂದು ಮಲಗೋ ಹಂಗಾಯ್ತು ಸಾ. ಹಿರಿಯ ಮಗಳು ಸ್ಕೂಲಿಗೆ ಹೋಗಿದ್ದಾಳೆ, ಚಿಕ್ಕವನು ಇಲ್ಲಿ ಆಡುತ್ತಿದ್ದಾನೆ. ನಮ್ಮ ಮೂವರನ್ನೂ ಇವಳು ಮನೆಕೆಲಸ ಮಾಡಿ ಸಾಕ್ತಾ ಇದ್ದಾಳೆ ಸಾ. ನಮ್ಮ ಮೂವರಿಗೂ ಇವಳು ತಾಯಿಯಂತೆ ಸಾ' ಎಂದು ಹೇಳುತ್ತಾ ಕಣ್ಣೀರು ಹಾಕಿದ. ಅವನ ಮಾತನ್ನು ಕೇಳುತ್ತಾ, ರಾಜೀವನಿಗೂ ಕಣ್ಣುತುಂಬಿ ಬಂತು. ಅಷ್ಟರಲ್ಲಿ ಹಾಲು ತೆಗೆದುಕೊಂಡು